ಸಾಕ್ಷಿಯನ್ನು ದಿಃ 15-12-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಬಿ ಎಮ್ ವಕೀಲರಿಂದ (ಪ್ರತಿವಾದಿ ಪರವಾಗಿ)**

ನಮ್ಮ ತಂದೆ ಈ ದಾವೆ ದಾಖಲಿಸುವಾಗ ಪ್ರತಿವಾದಿ ಎಲ್ಲಿ ಇರುತ್ತಿದ್ದರು ಗೊತ್ತಿಲ್ಲ. ದಾವಾ ಕರಾರು ಪತ್ರ ಆದಾಗಿನಿಂದ ದಾವೆ ದಾಖಲಾಗುವವರೆಗೆ ಪ್ರತಿವಾದಿ ಎಲ್ಲಿ ಇರುತ್ತಿದ್ದರು ಗೊತ್ತಿಲ್ಲ. ಪ್ರತಿವಾದಿಯ ವಿಳಾಸ ನಮ್ಮ ತಂದೆಗೆ ಗೊತ್ತಿತ್ತೋ, ಇಲ್ಲವೋ ಗೊತ್ತಿಲ್ಲ. ದಾವಾ ಕರಾರು ಪತ್ರ ಆದ ನಂತರ ನಮ್ಮ ತಂದೆ ಪ್ರತಿವಾದಿಗೆ ನೇರವಾಗಿ ನೋಟೀಸು ಕೊಟ್ಟಿದ್ದರು ಎಂದರೆ ಮೊದಲು ಬಾಯಿಮಾತಿನಿಂದ ಪ್ರತಿವಾದಿಯನ್ನು ವಿನಂತಿಸಿಕೊಂಡಿದ್ದರು ಆನಂತರ ನೋಟೀಸ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಮ್ಮ ತಂದೆ 2014 ಕ್ಕಿಂತ ಮೊದಲು ಪ್ರತಿವಾದಿಯನ್ನು ಕರಾರಿನ ಅನುಷ್ಠಾನಕ್ಕಾಗಿ ವಿನಂತಿಸಿಕೊಂಡಿದ್ದರು ಆದರೆ ನಮ್ಮ ತಂದೆ ಪ್ರತಿವಾದಿಯನ್ನು ವಿನಂತಿಸಿಕೊಂಡಿದ್ದ ನಿರ್ದಿಷ್ಟವಾದ ದಿನಾಂಕ ಗೊತ್ತಿಲ್ಲ. ಆ ಸಮಯದಲ್ಲಿ ನಾನು ವೈಯಕ್ತಿಕವಾಗಿ ಪ್ರತಿವಾದಿಯನ್ನು ಭೇಟ್ಟಿಯಾಗಿಲ್ಲ ಎಂದರೆ ಸರಿ. ಪ್ರತಿವಾದಿ ಬೆಂಗಳೂರಿನಲ್ಲ ವಾಸವಾಗಿದ್ದರಿಂದ ನಮ್ಮ ತಂದೆ ಪ್ರತಿವಾದಿಯನ್ನು ಖರೀದಿ ಮಾಡಿ ಕೊಡಲು ಒತ್ತಾಯಿಸಿರಲಿಲ್ಲ ಎಂದರೆ ಸರಿಯಲ್ಲ.

ದಾವೆಯಲ್ಲಿ ಹಾಜರಪಡಿಸಲಾದ ದಾಖಲೆಗಳನ್ನು ನೋಡಿದ್ದೇನೆ. ನಿಪಿಃ3 ರ ಎಲ್ಲಾ ಪುಟಗಳಲ್ಲಿ ನಮ್ಮ ತಂದೆಯ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮುಖ್ಯವಾದ ಸ್ಥಳದಲ್ಲಿ ಅಂದರೆ ನೋಂದಣಿಯಾಗುವ ಸಂದರ್ಭದಲ್ಲಿ ಸಹಿ ಇದೆ ಎಂದು ಹೇಳುತ್ತಾರೆ. ನಿಪಿಃ3 ರ 2 ನೇ ಪುಟದಲ್ಲಿ ಪೂರ್ಣ ಮತ್ತು ಭಾಗಶಃ ಪ್ರತಿಫಲ ಅಕ್ಷರದ ಮುಂದೆ ಖಾಲಿ ಬಿಡಲಾಗಿದೆ ಎಂದರೆ ಸರಿ. ನನ್ನ ಬಳಿ ಪ್ರತಿವಾದಿಯ ಫೋನ್ ನಂಬರ ಇಲ್ಲ ಆದರೆ ನಮ್ಮ ತಂದೆಯ ಬಳಿ ಇದ್ದಿರಬಹುದು. ನಮ್ಮ ತಂದೆ ಪ್ರತಿವಾಗಿ ದೂರವಾಣಿಯ ಕರೆ ಮಾಡಿದ್ದರೋ, ಇಲ್ಲವೋ ಗೊತ್ತಿಲ್ಲ. ನಮ್ಮ ತಂದೆ ಹಾಗೂ ಜಿ ವಾಯ್ ಹೊಸಮನಿ ಹಾಗೂ ಎಮ್ ಬಿ ಅಂಗಡಿ ಅವರ ವಿರುದ್ಧ ನಿಡಿಃ 7 ರ ಪ್ರಕಾರ ದೂರು ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಈ ಪ್ರಕರಣದ ಪ್ರತಿವಾದಿಯನ್ನು ಸಾಕ್ಷಿದಾರ ಎಂದು ತೋರಿಸಲಾಗಿದೆ ಎಂದರೆ ಗೊತ್ತಿಲ್ಲ. ಎಮ್ ಬಿ ಅಂಗಡಿ ರವರು ಪ್ರತಿವಾದಿಯ ತಾಯಿಯ ವಿರುದ್ಧ ಸಲ್ಲಿಸಿದ ದಾವೆ ರಾಜಿಯಾಗಿದೆ ಎಂದರೆ ಗೊತ್ತಿಲ್ಲ. ಸದರಿ ದಾವೆ ರಾಜಿಯಾಗಿದ್ದರಿಂದ ಪ್ರತಿವಾದಿಯ ತಾಯಿ ಖಾಸಗಿ ದೂರನ್ನು ಮುಂದುವರೆಸಿಲ್ಲ ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಯನ್ನು ಖರೀದಿಸುವ ಸಲುವಾಗಿ ಪ್ರತಿವಾದಿ ಸುಂದರಂ ಪೈನಾನ್ಸದಲ್ಲಿ ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ. ಆತ ತಾನು ಪಡೆದ ಸಾಲದ ಪೈಕಿ ರೂ.4,91,570/- ಬಾಕಿ ಉಳಿಸಿಕೊಂಡಿದ್ದ ಎಂದರೆ ಗೊತ್ತಿಲ್ಲ. ಪ್ರತಿವಾದಿ ಮನೆ ಕಟ್ಟುವ ಉದ್ದೇಶದಿಂದ ಬ್ಯಾಂಕ, ಸಹೋದರರು ಹಾಗೂ ತಂದೆಯಿಂದ ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ. ನಮ್ಮ ತಂದೆ ದಾವಾ ಕರಾರು ಪತ್ರದಲ್ಲಿ ನಮೂದಿಸಿದ ಹಣವನ್ನು ಯಾವಾಗ, ಯಾರ ಸಮಕ್ಷಮದಲ್ಲಿ ಪ್ರತಿವಾದಿಗೆ ನೀಡಿದ್ದಾರೆ ಎಂಬ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ. ನಮ್ಮ ತಂದೆ ಪ್ರತಿವಾದಿಗೆ ಹಣ ನೀಡಿಲ್ಲ ಎಂದು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಪ್ರತಿವಾದಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಹಣ ನೀಡುವಾಗ ಚೆಕ್ಕ ಮೂಲಕ ನೀಡದೇ ನಗದು ರೂಪದ್ದಲಿ ಏಕೆ ಹಣ ನೀಡಲಾಯಿತು ಗೊತ್ತಿಲ್ಲ. ನಮ್ಮ ತಂದೆ ಈ ಪ್ರಕರಣ ದಾಖಲಾದ ನಂತರ ಉದ್ದೇಶಪೂರ್ವಕವಾಗಿ ವೈಯಕ್ತಿಕವಾಗಿ ಬಂದು ಸಾಕ್ಷಿ ನುಡಿದಿಲ್ಲ ಎಂದರೆ ಗೊತ್ತಿಲ್ಲ. ರೂ. 10 ಲಕ್ಷ ಹಣವನ್ನು ನಮ್ಮ ತಂದೆ ಎಲ್ಲಿಂದ ತಂದಿದ್ದರು ಎಂಬ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಮ್ಮ ತಂದೆ ಪ್ರತಿವಾದಿಗೆ ಹಣ ನೀಡಿದ ಬಗ್ಗೆ ಕರಾರು ಪತ್ರವನ್ನು ಹೊರತುಪಡಿಸಿ ಬೇರೆ ರಶೀದಿ ಪಡೆದಿಲ್ಲ. ನಮ್ಮ ತಂದೆ ಹಣವನ್ನೆ ನೀಡಿಲ್ಲ ಹಾಗಾಗಿ ರಶೀದಿ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಆಸ್ತಿ ಹೊರತುಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ಗೊತ್ತಿಲ್ಲ. 2011-12 ಹಾಗೂ 2012-13 ಸಾಲಿನ ನಮ್ಮ ಅಂಗಡಿಯ ಲೆಕ್ಕ ಪತ್ರವನ್ನು ಈ ಪ್ರಕರಣದಲ್ಲಿ ಹಾಜರಪಡಿಸಿಲ್ಲ. ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

C/C. ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.